ಮಜ್ಜಿಗೆ ಹಿಡಿದು ತಾನೇ ಆಕೆಯ ಬಿಡಾರಕ್ಕೆ ಬಿಜಯಂಗೈದಳು ಗಂಗಕ್ಕ. ಕೊಳಕು ನೀಲಿ ಟಾರ್ಪಲ್ ಹೊದಿಸಿದ ಎರಡು ಸಣ್ಣ ಟೆಂಟ್‌ಗಳು, ಅವುಗಳ ಮುಂದಿನ ಒಂದಿಷ್ಟು ಆವರಣವನ್ನು ಅತ್ಯಂತ ಒಪ್ಪವಾಗಿ ಸೆಗಣಿ ಹಾಕಿ ಸಾರಿಸಲಾಗಿತ್ತು. ನೋಡಿದರೆ ಆ ಟೆಂಟುಗಳಲ್ಲಿ ಏನುಂಟು ಏನಿಲ್ಲ? ಒಂದು ಸಣ್ಣ ವಿಶ್ವವೇ ತೆರೆದುಕೊಂಡಿತ್ತು ಅಲ್ಲಿ. ಸಣ್ಣದೊಂದು ಕಟ್ಟಿಗೆಯ ಅಟ್ಟಣಿಗೆ, ಅದರ ಮೇಲೊಂದಿಷ್ಟು ಚಾಪೆ ಮತ್ತು ಕೌದಿಯ ಸುರುಳಿಗಳು, ಒಂದೆರಡು ಪ್ಲಾಸ್ಟಿಕ್ ಕುರ್ಚಿಗಳು, ಎರಡು ನೀರಿನ ಡ್ರಮ್ಮುಗಳು, ಅವುಗಳ ಮುಚ್ಚಳಗಳ ಮೇಲೆ ಹರಡಿಕೊಂಡಿದ್ದ ಮೊಬೈಲ್ ಚಾರ್ಜರ್‌ಗಳು ಮತ್ತು ಸ್ವಿಚ್ ಬೋರ್ಡು, ಒಂದು ಒರಳು ಕಲ್ಲು, ಕಲ್ಲಿನಲ್ಲಿ ಹೂಡಿದ್ದ ಎರಡು ಗಟ್ಟಿಮುಟ್ಟಾದ ಒಲೆಗಳು. ಎಡೆಯಲ್ಲಿಯೇ ಒಂದಿಷ್ಟು ದಿನಸಿ ಡಬ್ಬಿಗಳು, ಪಾತ್ರೆಗಳು, ಅವುಗಳ ಸಂದಿಯಲ್ಲಿಯೇ ಟ್ರೇ ಒಂದರಲ್ಲಿ ಒಂದಿಷ್ಟು ದೇವರುಗಳು, ಹಣತೆ, ಬತ್ತಿ, ಎಣ್ಣೆ, ಟಾರ್ಪಲ್ಲಿನ ಯಾವ್ಯಾವುದೋ ಮಗ್ಗುಲುಗಳಲ್ಲಿ ತಲೆ ಎತ್ತಿಕೊಂಡಿದ್ದ ಬಣ್ಣ ಬಣ್ಣದ ಹಲ್ಲುಜ್ಜುವ ಬ್ರಷ್ ಹಾಗೂ ಬಾಚಣಿಗೆಗಳು, ಒಂದೆರಡು ಮುರಿದ ಆಟಿಕೆಗಳು... ಜೊತೆಗೆ ಸುತ್ತಮುತ್ತಲಿನ ಮರಗಳ ಕೊಂಬೆಗಳನ್ನೆಲ್ಲಾ ತಮ್ಮ ಬಟ್ಟೆಗಳನ್ನು ಒಣಗಿಸುವ ಸಾಧನಗಳಾಗಿ ಪರಿವರ್ತಿಸಿಕೊಂಡಿದ್ದರು. ಇರುವ ಅಂಗೈ ಅಗಲ ಜಾಗದಲ್ಲೇ ತಮ್ಮ ಬದುಕನ್ನು ಕಟ್ಟಿಕೊಂಡಿದ್ದ ಅವರ ಜಾಣ್ಮೆಗೆ ಗಂಗಕ್ಕ ತಲೆದೂಗಿದಳು. ಅಷ್ಟರಲ್ಲೇ 'ಅವ್ವಾರೆ...' ಎಂದು ಬಾಯ್ತುಂಬಾ ನಗುತ್ತಾ ಪ್ರತ್ಯಕ್ಷಳಾದಳು ಶಿವಮ್ಮ. ಅವಳ ಬೆನ್ನಿಗಿದ್ದ ಮೂವರು ಮಕ್ಕಳ ಕೈಯಲ್ಲಿ ಒಂದೊಂದು ಬಿಸ್ಕೇಟಿನ ಪೊಟ್ಟಣಗಳಿದ್ದವು. 'ತಗ ಮಜ್ಜಿಗೆ' ಎಂದ ಗಂಗಕ್ಕ, 'ಮಳೆ ಬಂದ್ರೆ ಎಂತ ಮಾಡ್ತೀರೆ? ಎಲ್ಲಾ ಒದ್ದೆ ಆಗ್ತದಲ್ಲೇ' ಎಂದಳು ಕಳಕಳಿಯಿಂದ.

'ಮಳಿ ಬಂದ್ರೂ ಏನ್ ಆಗಾಂಗಿಲ್ರಿ. ಸುತ್ತೆಲ್ಲಾ ಕಾರ್ಗಿ ಹೊಡ್ದ ಬಿಡಾರ ಮಾಡ್ತೇವಲ್ರಿ... ಹೊರಗನ್ನೀರು ಒಳಗ ಬರಾಂಗಿಲ್ರೀ' ಎಂದು ವಿವರಿಸಿದ ಶಿವಮ್ಮ, 'ಕೂಡ್ರಿ ಅವ್ವಾರೆ' ಎನ್ನುತ್ತಾ ಕುರ್ಚಿಯೊಂದನ್ನು ಮುಂದಿಟ್ಟಳು.

'ನೀವೆಷ್ಟು ಮಂದಿ ಇದ್ದೀರೆ ಬಿಡಾರದಲ್ಲಿ?' ಗಂಗಕ್ಕನ ಕುತೂಹಲ ಗರಿಗೆದರಿತ್ತು.

'ನಾವ್ ಹದ್ನಾಕ್ ಮಂದಿ ರೀ. ನಾನ, ನನ್ ಮೈದ್ನಾನ್ ಹ್ಯಾಣತಿ, ನಮ್ ಸೊಸಿ... ನಮ್ ಮೂವರನ್ ಬಿಟ್ ಉಳಿದೆಲ್ಲಾರೂ ಗಣಸ್ರ. ನಮ್ಮನಿ ಗಣಸ್ರ್ ಮೂರ್ ಮಂದಿ, ಬಾಕ್ಯಾರೆಲ್ಲಾ ಹಂಗ ನಮ್ಮೊಟ್ಟಿಗೆ ಉಳ್ದಾರ್ರೀ.'

'ಇಷ್ಟು ಜನ ಎಲ್ಲಿ ಮನಗ್ತೀರಿ? ಈ ಮಕ್ಕಳೆಲ್ಲ ಯಾರೆ?'

'ಆ ಸಣ್ಣದು ನಮ್ ಮಗಂದ್ರೀ. ಬಾಕಿ ಇಬ್ರ್ ನಮ್ ಮೈದ್ನಾಂದ್ರೀ. ಎಲ್ಲ ಕೆಲ್ಸಕ್ ಹೋದ್ರೆ ಇಲ್ಲಿ ನೋಡಾಕ್ ಒಬ್ಬಾಂವ ಬೇಕಲ್ರಿ. ಹಾಂಗ ನಾ ಇಲ್ಲೇ ಉಳೀತೇನಿ ಈ ಹುಡ್ಗಾರ್ ಸಂಗ್ಡ. ನಾವ್ ಈ ಮಕ್ಕಳ ಸಂಗ್ಡ ಒಳಗ್ ಮಲಗ್ತೀವ್ರಿ. ಗಣಸ್ರೆಲ್ಲ ಹೊರಗ ಅಡ್ಡಾಗತಾರ. ಇನ್ ಸ್ವಲ್ಪ ದಿನಾರಿ. ಮಳಿ ಹಿಡದಾಕ್ಷಣಕ್ ಊರಿಗ್ ಹೋಯ್ಬಿಡ್ತೀವ್ರಿ...' ಹೀಗೆ ಈಕೆ ಒಂದು ಪ್ರಶ್ನೆ ಕೇಳಿದರೆ ಆಕೆ ನಾಲ್ಕಕ್ಕೆ ಆಗುವಷ್ಟು ಉತ್ತರಿಸುತ್ತಿದ್ದಳು. ಯಾವುದೇ ಪ್ರಶ್ನೆಗೂ ಒಂದು ಪ್ರಶಾಂತ ನಗೆ ಶಿವಮ್ಮನ ಮುಖದಲ್ಲಿರುತ್ತಿತ್ತು. ಮಾತಿನ ಮತ್ತಿನಲ್ಲಿ ಹೊತ್ತೇರಿದ ಮೇಲೆಯೇ ಗಂಗಕ್ಕನಿಗೆ ಎಚ್ಚರಾಗಿದ್ದು.

ಎಚ್ಚರವೆಂದರೆ... ಒಂಥರಾ ವಿಸ್ಮೃತಿಯಿಂದ ಮರಳಿ ಬಂದಂತಹ ಎಚ್ಚರ! ಮಜ್ಜಿಗೆ ಮಾತ್ರವೇ ಅಲ್ಲ, ಮನೆಯಲ್ಲಿ ಏನೇ ಅಡುಗೆ–ತಿಂಡಿ ಉಳಿದರೂ ಅದು ಈಗೀಗ ಬಿಡಾರಕ್ಕೇ ರವಾನೆಯಾಗುತ್ತಿತ್ತು, ಅಥವಾ ರವಾನೆಯಾಗಲೆಂದೇ ಉಳಿಯುತ್ತಿತ್ತೋ ಏನೋ!

'ಪ್ರತಿದಿನ ಯಂತ ಅಡಿಗೆ ಮಾಡ್ತೀರಿ ನೀವಾದ್ರೂ... ಹಿಡಿ ಬದನೆಕಾಯಿ, ನಮ್ಮನೆ ಹಿತ್ಲಿಂದೇ' ಎಂತಲೋ, 'ಗಿಡದಲ್ಲಿ ಬೇಕಷ್ಟು ನಿಂಬೆಹಣ್ಣಿದೆ... ಕೊಯ್ಕ. ಆ ಹುಡುಗ್ರಿಗೆ ಪಾನಕನಾದ್ರೂ